ಆದನ್ನು ನಿಲ್ಲಿಸಲಾಗುವುದು, ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ ಕಾರವಾರ ಜಿಲ್ಲೆಯಲ್ಲಿ ಬಹಳ ಮುಖ್ಯವಾದ ಒಂದು ಕೆಮಿಕಲ್ ಇಂಡಸ್ಟ್ರಿ ಇತ್ತು. ಅಲ್ಲಿ ಆ ರೀತಿ ಆಯಿತು ಎಂದ ತಕ್ಷಣ ಸರ್ಕಾರ ಅಲ್ಲಿಗೆ ಪೋಲೀಸಿನವರನ್ನು ಕಳುಹಿಸಿಕೊಟ್ಟು ಸ್ಟಾಪ್ ಮಾಡಿಸಿದ್ದೇವೆ. ಮಾನ್ಯ ಸದಸ್ಯರ ಸಲಹೆ ಸರ್ಕಾರ ಗಮನಿಸಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ, —ಮಾನ್ಯ ಮಂತ್ರಿಗಳು ಬಹಳ ವ್ಯವಸ್ಥಿತ ರೀತಿಯಲ್ಲಿ ಹೇಳಿದರು ಪರಿಸರ ಮಾಲಿನ್ಯವನ್ನು ನಾವು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ ಅಮ್ಮಸಂದ್ರ ಡೈಮೆಂಡ್ ಫ್ಯಾಕ್ಟರಿ ಇದೆ. ಅಲ್ಲಿಂದ ಸುಮಾರು ೧೦-೧೨ ಕಿಲೋಮೀಟರ್‌ವರೆವಿಗೂ ದೂಳು ಬರುತ್ತದೆ. ಆ ದೂಳು ಕಾಲು ಇಂಚು ಮಂರಗಳ ಎಲೆಗಳ ಮೇಲೆ ಕುಳಿತುಕೊಂಡಿರುತ್ತದೆ, ಈ ಬಗ್ಗೆ ಏಕ್ಸ್‌ಪರ್ಟ್ಸ್ ಹೇಳಿದ್ದಾರೆ ಇದು ಒಂದು ರೀತಿಯಲ್ಲಿ ಪರ್ಟಿಲೈಜರ್ ಇದ್ದ ಹಾಗೆ ಎಂದು; ಈ ರೀತಿ ದೂಳು ಇರುವುದರಿಂದ ಫೋಟಾಸಿಸಿಸ್‌ಗೆ ರೀ ಆಕ್ಷನ್ ಆಗುತ್ತದೆ. ಈ ದೂಳಿನಿಂದ ತೆಂಗಿನ ಮರಗಳು ಒಣಗಿ ಹೋಗುವಂತಹ ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೆ ರೈತರು ದೂರು ಕೊಟ್ಟಿದ್ದಾರೆ. ಮನವಿ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು. ದೂಳನ್ನು ತಡೆಗಟ್ಟಲು ಒಂದು ಹೊಸ ಟೆಕ್ನಾಲಜಿ ಬಂದಿದೆ, ಆ ಟೆಕ್ನಾಲಜಿಯನ್ನು ಅಳವಡಿಸಿಕೊಳ್ಳಿ ಎಂದರೆ, ಅದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ ಎಂದು ಅವರು ಆ ಟೆಕ್ನಾಲಜಿಯನ್ನು ಅಳವಡಿಸಿಕೊಂಡಿಲ್ಲ. ಇದರಿಂದ ಸಾವಿರಾರು ರೈತರು ಹಾಳಾಗುತ್ತಿದ್ದಾರೆ, ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ,

ಶ್ರೀ ಜೆ. ಹೆಚ್. ಪಟೇಲ್. —ಧೂಳು ತುಂಬಿ ರೈತರ ಮರಗಿಡಗಳನ್ನು ಹಾಳು ಮಾಡುವುದಕ್ಕೆ ನಾವು ಸಿಮೆಂಟ್ ಫಾಕ್ಟರಿಗೆ ಲೈಸೆನ್ಸ್ ಕೊಡಲಿಲ್ಲ. ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಾಗಲಿ ಉದ್ದಿಮೆಗಳನ್ನು ಸ್ಥಾಪನೆ ಮಾಡುವಾಗ ಇವೆಲ್ಲವನ್ನೂ ಆಲೋಚನೆ ಮಾಡಿರುತ್ತಾರೆ. ಕೆಲವಕ್ಕೆ ಪರಿಹಾರ ಇದೆ, ಕೆಲವಕ್ಕೆ ಪರಿಹಾರ ಇಲ್ಲ. ಧೂಳು ಬರುತ್ತದೆ, ಬರತಕ್ಕಂಥ ಧೂಳನ್ನು ತಡೆಗಟ್ಟುವುದಕ್ಕೆ ಇತ್ತೀಚಿಗೆ ಡ್ರೈ ಟೆಕ್ನಾಲಜಿ, ಬಂದಿದೆ, ಮತ್ತು ವೆಟ್ ಟೆಕ್ನಾಲಜಿ ಇದೆ. ಆ ಬಗ್ಗೆ ಇಲ್ಲಿ ಎಕ್ಸ್‌ಪ್ಲೆನೇಶನ್ ಬೇಕಾಗಿಲ್ಲ. ಬರತಕ್ಕಂಥ ಧೂಳಿನಿಂದ ತೆಂಗಿನ ಸಸಿಗಳಿಗೆ ಏನೂ ತೊಂದರೆಯಾಗುವುದಿಲ್ಲ ಇನ್ನೂ ಸಣ್ಣ ಸಣ್ಣ ತರಕಾರಿ ಬೆಳೆಗೆ ಹಾನಿಯಾಗುತ್ತದೆಂದು ಗೊತ್ತಾಗಿದೆ, ತೆಂಗಿನ ಸಸಿಗಳು ಹಾಳಾಗುತ್ತಿವೆ ಎಂದು ಹೊಸದುರ್ಗ, ಗುಲ್ಬರ್ಗ ಈ ಭಾಗಗಳಿಂದ ರೈತರು ದೂರು ಮಾಡುತ್ತಿದ್ದಾರೆ. ಮತ್ತು ಮರಗಳ ಎಲೆಗಳ ಮೇಲೆ ಧೂಳು ತುಂಬಿದರೆ ಅದು ಪರ್ಟಿಲೈಜರ್ ಆಗುತ್ತದೆಂದು ಯಾರೂ ನಮಗೆ ಓಪಿನೀಯನ್ ಕೊಟ್ಟಿಲ್ಲ. ಇವುಗಳ ಗ್ರೋತ್ ಕೆಡುವುದಿಲ್ಲ. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ಪುನರ್ ಪರಿಶೀಲನೆ ಮಾಡುತ್ತೇನೆ.

ನಂಜನಗೂಡು ಉಪ ವಿಭಾಗದಲ್ಲಿರುವ ಕರೀಕಲ್ಲುಗಳನ್ನು ಸಾಗಿಸುವುದು

೧೨೨೦. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ)—ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ಕಂದಾಯ ಉಪ ವಿಭಾಗದಲ್ಲಿರುವ ಕರೀಕಲ್ಲುಗಳನ್ನು ಖಾಸಗಿಯವರು ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಈವರೆಗೆ ಕೈಗೊಂಡಿರುವ ಕ್ರಮಗಳೇನು ?

ಇ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಕಲ್ಲು ಸಾಗಾಣಿಕೆ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ?

ಈ) ಈ ಅಕ್ರಮ ಸಾಗಣೆಯಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು ಮತ್ತು ಕೆಲವು ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದ ಕಲ್ಲುಗಳ ಬಗ್ಗೆ ವಿಲೇವಾರಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಹಾಗೂ ಇದರಿಂದ ಬಂದಿರುವ ಆದಾಯವೆಷ್ಟು ?

ಶ್ರೀ ರಮೇಶ್ ಸಿ. ಜಿಗಜಿನಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)—

ಅ) ಬಂದಿದೆ.

ಆ) ಈ ವಿಭಾಗದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ೧೯ ಲೀಸುಗಳನ್ನು ಕಪ್ಪು ಕಲ್ಲಿಗಾಗಿ ನೀಡಿದೆ. ಹಾಗೂ ಪಟ್ಟಾ ಜಮೀನುಗಳನ್ನು ಕ್ವಾರೀ ಮಾಡುವ ಬಗ್ಗೆ ಇತ್ತೀಚೆಗೆ ಹೈಕೋರ್ಟ್ ನೀಡಿರುವ ತೀರ್ಪಿನ ಮೇಲೆ ಗಣಿಗಾರಿಕೆ ನಡೆಯುತ್ತಿದೆ.

ಈ ಗಣಿ ಗುತ್ತಿಗೆಯನ್ನು ಕೆ ಎಂ.ಎಂ.ಸಿ.ನಿಯಮದ ಪ್ರಕಾರ ನೀಡಲಾಗಿದ್ದು ಕಲ್ಲು ಸಾಗಣೆ ತಡೆಯುವುದರ ಆವಶ್ಯಕತೆ ಉದ್ಭವಿಸುವುದಿಲ್ಲ. ಹೈಕೋರ್ಟಿನ ತೀರ್ಪಿನ ಮೇರೆಗೆ ಪಟ್ಟಾ ಭೂಮಿಗಳಲ್ಲಿನ ಗಣಿಗಾರಿಕೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂತಿಲ್ಲ.

ಇ) ೧. ಕೆ.ಎಂ.ಎಂ.ಸಿ ಆರ್. ೧೯೬೯ರ ಮೇರೆಗೆ ನೀಡಿರುವ ಗುತ್ತಿಗೆಗಳಲ್ಲಿ ಮತ್ತು ಪಟ್ಟಾ ಜಮೀನುಗಳಲ್ಲಿ ನಡೆಯುವ ಕಲ್ಲು ಸಾಗಣೆಯು ಅಧಿಕೃತವಾದುದಾಗಿರುವುದರಿಂದ ಇದನ್ನು ತಡೆಯುವುದು ಸಾಧ್ಯವಿರುವುದಿಲ್ಲ.

೨. ಒಮ್ಮೆ ಗುತ್ತಿಗೆದಾರರು ರಾಜಧನವನ್ನು ಸರ್ಕಾರಕ್ಕೆ ಪಾವತಿ ಮಾಡಿದ ಮೇಲೆ ಕಲ್ಲು ಸಾಗಾಣಿಕೆಗೆ ಬೇರೆ ಪರವಾನಗಿಯನ್ನು ಪಡೆಯಬೇಕಾಗಿಲ್ಲ ಮತ್ತು ಇದು ವಾಹನ ಸಂಚಾರ ಕಾಯ್ದೆಗೆ ಒಳಪಟ್ಟಿದೆ.

೩. ಸರ್ಕಾರಿ ಸ್ವಾಮ್ಯದ ಜಮೀನುಗಳಲ್ಲಿ ನಡೆಯುವ ಅನಧಿಕೃತ ಗಣಿಗಾರಿಕೆ ತಡೆಯುವ ಸಲುವಾಗಿ ಪ್ರಸುತ ಇರುವ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಲಾಗುತ್ತಿದೆ. ಅಲ್ಲದೆ ಹರಿಯಾಣ ಸರ್ಕಾರದಲ್ಲಿ ಚಾಲ್ತಿಯಲ್ಲಿರುವಂತೆ ನಾಡಿನ ಎಲ್ಲಾ ಖಾಸಗಿ ಸ್ವಾಮ್ಯ ಸರ್ಕಾರಕ್ಕೆ ಸೇರಿದೆಂದು ಕಾಯಿದೆ ತರಲು ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

ಈ) ಹೈಕೋರ್ಟಿನ ತೀರ್ಪಿನ ಮೇರೆಗೆ ಪಟ್ಟಾ ಭೂಮಿಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆಗಾಗಿ ಅವರು ಸರ್ಕಾರಕ್ಕೆ ಯಾವುದೇ ರೀತಿಯ ರಾಜಧನ ಕೊಡಬೇಕಾಗಿರುವುದಿಲ್ಲ. ಚಾಮರಾಜನಗರ ತಾಲ್ಲೂಕು ತಹಶೀಲ್ದಾರ್‌ರವರು ೧೫೧೧.೧೯೭೭ ಕ್ಕೂ ಬಿಕ್ ಮೀಟರಿನಷ್ಟು ವಿವಿಧ ಬಣ್ಣಗಳ ಗ್ರಾನೈಟನ್ನು ಮೈಸೂರು ಮಿನರಲ್ಸ್ ಸಂಸ್ಥೆಯ ವಶಕ್ಕೆ ಕೊಟ್ಟಿದ್ದಾರೆ. ಮೈಸೂರು ಮಿನರಲ್ಸ್ ಸಂಸ್ಥೆಯವರು ೧೨೦ ಕ್ಯೂಬಿಕ್ ಮೀಟರಿನಷ್ಟು ಗ್ರಾನೈಟ್ ಕಲ್ಲನ್ನು ಹಾಸನದಲ್ಲಿರುವ ಪಾಲಿಷಿಂಗ್ ವಿಭಾಗಕ್ಕೆ ಕಳುಹಿಸಿದ್ದಾರೆ. ಇನ್ನೂ ಉಳಿದ ಗ್ರಾನೈಟನ್ನು ನ್ಯಾಯಾಲಯದ ಆದೇಶವಿದ್ದುದರಿಂದ ಸಾಗಿಸಲಾಗಿಲ್ಲ. ಈ ಕಲ್ಲುಗಳು ವಿವಿಧ ಗಾತ್ರಗಳಿಂದ ಕೂಡಿದ್ದಾಗಿರುವುದರಿಂದ ಅವುಗಳನ್ನು ಪಾಲಿಷ್ ಮಾಡಿದ ನಂತರ ಆಗಿನ ಮಾರ್ಕೆಟ್ ಬೆಲೆ ಅನುಸರಿಸಿ ಇದರಿಂದ ಬರಬಹುದಾದ ಆದಾಯ ಇಂತಿಷ್ಟೇ ಎಂದು ಹೇಳಲು ಸಾಧ್ಯವಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕರೀ ಕಲ್ಲುಗಳನ್ನು ಮಾರಾಟ ಮಾಡುವುದರಿಂದ ಕಂಟ್ರಾಕ್ಟ್‌ದಾರರುಗಳಿಗೆ ಎಷ್ಟು ಆದಾಯ ಬರುತ್ತಿದೆ? ಹಾಗೂ ಕಂಟ್ರಾಕ್ಟ್‌ದಾರರುಗಳಿಂದ ಸರ್ಕಾರಕ್ಕೆ ಎಷ್ಟು ರಾಯಲ್ಟಿ ಬರುತ್ತಿದೆ? ರಾಯಲ್ಟಿ ಕೊಡುವ ಹೆಣಕ್ಕಿಂತ ಎಷ್ಟು ಪಟ್ಟು ಆದಾಯ ಕಂಟ್ರಾಕ್ಟ್‌ದಾರರುಗಳಿಗೆ ಬರುತ್ತಿದೆ ಎಂಬುದನ್ನು ಪರೀಕ್ಷೆ ಮಾಡಿದ್ದೀರಾ? ಈ ಕರೀ ಕಲ್ಲು ಬಹಳ ಜನ ಆಫೀಸರ್‌ಗಳನ್ನು ನುಂಗಿಕೊಂಡಿಂ ಬಿಟ್ಟಿದೆ. ಆಮೇಲೆ, ಫಾರೆಸ್ಟ್ ಮಂತ್ರಿ ಗಣಿ ಇಲಾಖೆಗಳು ಒಟ್ಟಿಗೆ ಸೇರಿ ಒಂದೇ ಪಜೆನ್ಸಿ ಮೂಲಕ ರಾಯಲ್ಟಿಯನ್ನು ಪಡೆದು ಗುತ್ತಿಗೆ ಕೊಡುವುದಕ್ಕೆ ಅಗತ್ಯವಾದ ರೂಲ್ಸ್ ರೆಗ್ಯುಲೇಷನ್‌ಗಳನ್ನು ಮಾಡುತ್ತೇವೆಂದು ಈ ಹಿಂದೆ ಮಾನ್ಯ ರೆವಿನ್ಯೂ ಮಿನಿಸ್ಟರ್‌ರವರು ಹೇಳಿದ್ದರು, ಅದರ ಬಗ್ಗೆ ಏನು ಮಾಡಿದ್ದೀರಿ? ಕೋರ್ಟಿನಿಂದ ತಡೆ ಆಜ್ಞೆ ಇದೆ. ಅದಕ್ಕೆ ಲೇಟ್ ಆಯಿತೆಂದು ತಡ ಮಾಡುತ್ತಿದ್ದರೆ ಸರ್ಕಾರಕ್ಕೆ ಆದಾಯ ಬರಬೇಡವೇ? ನಿಮ್ಮ ಬಂಡಾರ ತುಂಬಿ ತುಳುಕುತ್ತಿದೆಯಾ? ನಿಮಗೆ ದುಡ್ಡು ಬೇಕಾಗಿಲ್ಲವೆ? ಇಷ್ಟು ಬಂದವರು ದುಡ್ಡು ಮಾಡಿಕೊಳ್ಳಲೆಂದು ಕಾನೂನು ಮಾಡದೇ ಸುಮ್ಮನೇ ಇದ್ದೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕಿಯವರು ಏನು ಒಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೋ ಅದು ನನಗೂ ಅರ್ಥವಾಗಿದೆ ಸರ್ಕಾರಕ್ಕೆ ಇದರ ಬಗ್ಗೆ ಯಾವುದೇ ದುರುದ್ದೇಶ ಇಲ್ಲ. ಪದೇ ಪದೇ ಗುತ್ತಿಗೆದಾರರು ಕೋರ್ಟಿಗೆ ಹೋಗಿ ತಡೆಯಾಜ್ಞೆ

ಗಳನ್ನು ತಂದಿದ್ದರಿಂದ ಸ್ವಲ್ಪ ಅಡೆತಡೆ ಆಗಿದೆ. ಫಾರೆಸ್ಟ್ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಗಳಂ ಇನ್ನು ಮುಂದೇ ಒಂದೇ ಏಜೆನ್ಸಿ ಮೂಲಕ ಗುತ್ತಿಗೆ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ವಿಷಯ ಕ್ಯಾಬಿನೆಟ್ ಮುಂದೆ ಇದೆ. ಅದನ್ನು ಸಾಧ್ಯವಾದ ಮಟ್ಟಿಗೆ ಬಹಳ ಬೇಗ ತೀರ್ಮಾನ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ,—ಬಹಳ ಬೇಗ ಅಂದರೆ ಎಷ್ಟು ದಿನದಲ್ಲಿ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ನಿರ್ದಿಷ್ಟವಾಗಿ ಇಷ್ಟೇ ದಿನದಲ್ಲಿ ಮಾಡಲಾಗುತ್ತದೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಜಿ. ರಾಜಗೌಡ.—ಕರೀಕಲ್ಲು ಸಾಗಾಣಿಕೆ ಬಗ್ಗೆ ಪರವಾನಿಗೆ ಕೊಡುವುದಕ್ಕೆ ಇನ್ನು ಮುಂದೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬದಲು ಮೈನ್ಸ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಒಟ್ಟಿಗೆ ಸೇರಿ ಒಂದೇ ಏಜೆನ್ಸಿ ಮುಖಾಂತರ ಗುತ್ತಿಗೆ ಕೊಡಲಾಗುತ್ತದೆಂದು ಮಾನ್ಯ ರೆವಿನ್ಯೂ ಮಂತ್ರಿಯವರು ಆಶ್ವಾಸನೆ ಕೊಟ್ಟಿದ್ದಾರೆ. ಆದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಇದರ ಬಗ್ಗೆಯೇ ಈಗ ತಾನೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಮುಂದೆ ನಿಮ್ಮ ಪ್ರಶ್ನೆಯೇ ಇದೆ. ತಾವು ಕೇಳಿ.

ರೇಷ್ಮೆ ಗೂಡಿನ ಮಾರುಕಟ್ಟೆಗಳ ಕುರಿತಂ

೧೦೮೭. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ರೇಷ್ಮೆ ಖಾತೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳು ಎಂದಿನಿಂದ ಯಾವ ಯಾವ ಸ್ಥಳಗಳಲ್ಲಿ ಸ್ಥಾಪನೆಯಾಗಿರುತ್ತವೆ.

ಆ) ರೇಷ್ಮೆ ಗೂಡು ಮಾರುಕಟ್ಟೆಗಳು ಸ್ಥಾಪನೆಯಾದಾಗಿನಿಂದ ದಿನಾಂಕ ೨೦-೨-೮೮ರವರೆಗೆ ಅವುಗಳು ಗಳಿಸಿರುವ ಶುಲ್ಕವೆಷ್ಟು?

ಇ) ಈ ಬಾಬಿನಲ್ಲಿ ರೇಷ್ಮೇ ಕೃಷಿಕರಿಗಾಗಿ ರೇಷ್ಮೆ ನೂಲು ಬಿಚ್ಚಿಸುವವರಿಗಾಗಿ ಮಾಡಿದ ವೆಚ್ಚವೆಷ್ಟು?

ಈ) ರೇಷ್ಮೆ ವಿನಿಮಯಂ ಕೇಂದ್ರ ಸ್ಥಾಪನೆಯಾದ ದಿನದಿಂದ ಇಲ್ಲಿಯವರೆಗೆ ಗಳಿಸಿದ ಶುಲ್ಕವೆಷ್ಟು?

ಶ್ರೀ ಕೆ. ಎಂ. ವಿರಿನಿಯಪ್ಪ (ರೇಷ್ಮೆ ಖಾತೆ ಸಚಿವರು).—

ಅ) ರೇಷ್ಮೆ ಗೂಡಿನ ಮಾರುಕಟ್ಟೆಗಳು ಯಾವ ಯಾವ ಸ್ಥಳಗಳಲ್ಲಿ ಎಂದಿನಿಂದ ಸ್ಥಾಪನೆಯಾಗಿರುತ್ತವೆ ಎಂಬುದನ್ನು ಅನುಬಂಧ-೧ರಲ್ಲಿ ಸಮೂಡಿಸಲಾಗಿದೆ.

ಆ) ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ೧೯೬೬-೭೦ನೇ ಸಾಲಿನಿಂದ ೧೯೮೭-೮೮ರ ಫೆಬ್ರವರಿ ಅಂತ್ಯದವರೆಗೆ ಗಳಿಸಿರುವ ಮಾರುಕಟ್ಟೆ ಶುಲ್ಕ ೨೫.೦೨ ಕೋಟಿ ರೂಪಾಯಿಂಗಳು. ವಿವರಗಳು ಅನುಬಂಧ-೨ರಲ್ಲಿದೆ.

ಇ) ನಾಲ್ಕು ವರ್ಷಗಳಲ್ಲಿ ರೇಷ್ಮೆ ಮಾರುಕಟ್ಟೆಗಳ ಬಾಬಿನಲ್ಲಿ ರೇಷ್ಮೆ ಕೃಷಿಕರಿಗಾಗಿ ಹಾಗೂ ನೂಲು ಬಿಚ್ಚುವವರಿಗಾಗಿ ಸರ್ಕಾರದ ವಿವಿಧ ಯೋಜನೆಗಳಲ್ಲಿ ಸುಮಾರು ೧೦.೦೭ ಕೋಟಿ ರೂಪಾಯಿಗಳು ವೆಚ್ಚವಾಗಿದೆ. ವಿವರಗಳನ್ನು ಅನುಬಂಧ-೩ರಲ್ಲಿ ನೋಡಬಹುದು.

ಈ) ರೇಷ್ಮೆ ವಿನಿಮಯಂ ಕೇಂದ್ರಗಳು ಸ್ಥಾಪನೆಯಾದಂದಿನಿಂದ ೧೯೮೭-೮೮ನೇ ಫೆಬ್ರವರಿ ಅಂತ್ಯದವರೆಗೆ ಗಳಿಸಿದ ಮಾರುಕಟ್ಟೆ ಶುಲ್ಕದ ಮೊತ್ತ ೧೧.೩೧ ಕೋಟಿ ರೂಪಾಯಿಗಳು. ವಿವರಗಳನ್ನು ಅನುಬಂಧ-೪ರಲ್ಲಿ ಕೊಡಲಾಗಿದೆ.